ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಮಂಡಲ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 17/02/2020

# ಇಂದಿನಿಂದ ಲಡಾಯಿ ಕಲಾಪ

ಮಾ. 5 ಬಜೆಟ್ ಮಂಡನೆ




- ನಿರ್ಧಾರವಾಗದ ಅಧಿಕೃತ ವಿಪಕ್ಷ ನಾಯಕತ್ವ
- ಸೋಮವಾರ ಬೆಳಗ್ಗೆ 11 ಗಂಟೆಗೆ ರಾಜ್ಯಪಾಲ ವಜುಭಾಯ್ ವಾಲಾ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ

ಸಂ.ಕ ಸಮಾಚಾರ ಬೆಂಗಳೂರು

ಅಧಿಕೃತ ವಿಪಕ್ಷ ನಾಯಕತ್ವ ನಿರ್ಧಾರವಾಗದ ಹಿನ್ನೆಲೆಯ ನಡುವೆಯೇ ಪ್ರಸಕ್ತ ಸಾಲಿನ ಬಜೆಟ್ ಅಧಿವೇಶನ ನಾಳೆ ದಿ.17ರಿಂದ ಆರಂಭಗೊಳ್ಳಲಿದ್ದು ವಿಪಕ್ಷಗಳ ಮತ್ತು ಆಡಳಿತ ಪಕ್ಷದ ನಡುವೆ ನೇರ ಹಣಾಹಣಿ ನಡೆಯಲಿದ್ದು, ಒಟ್ಟಾರೆ ಸ್ಥಿತಿ ಕುತೂಹಲಕ್ಕೆಡೆ ಮಾಡಿ ಕೊಟ್ಟಿದೆ. ಸೋಮವಾರ ಬೆಳಗ್ಗೆ 11 ಗಂಟೆಗೆ ರಾಜ್ಯಪಾಲ ವಜುಭಾಯ್ ವಾಲಾ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡುವ ಮೂಲಕ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ. ತದನಂತರ ಸಾಂಪ್ರದಾಯಿಕ ಕಾರ್ಯಕಲಾಪಗಳು ಆರಂಭವಾಗಲಿವೆ.

ವಿಧಾನಸಭೆಯ ಉಪಚುನಾವಣೆಯ ನಂತರ ಆಡಳಿತಾರೂಢ ಬಿಜೆಪಿ ಸರ್ಕಾರಕ್ಕೆ ಇದು ಪ್ರಥಮ ಅಧಿವೇಶನವಾಗಿದೆ. ಬದಲಾದ ರಾಜಕೀಯ ಸನ್ನಿವೇಶನದ ಬೆನ್ನಲ್ಲೇ ವಿಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಸಜ್ಜಾಗಿವೆ. ಹುಬ್ಬಳ್ಳಿಯಲ್ಲಿನ ಆಜಾದಿ ಕಾಶ್ಮೀರ್ ಘೋಷಣೆ, ಬೀದರ್‌ನ ಶಾಹೀನ್ ಶಾಲೆ ಮೇಲಿನ ದೇಶದ್ರೋಹ ಪ್ರಕರಣ, ಸಿಎಎ-ಎನ್‌ಆರ್‌ಸಿ ಪ್ರತಿಭಟನೆಗೆ ನಿಷೇಧ ಹೇರಿದ್ದು, ಆನಂದಸಿಂಗ್ ಅವರಿಗೆ ಅರಣ್ಯ ಖಾತೆ ನೀಡಿರುವ ಸಂಗತಿ ಚರ್ಚೆಗೆ ಬರಲಿವೆ. ನೆರೆ ಸಂತ್ರಸ್ತರಿಗೆ ಪರಿಹಾರ ದೊರಕದಿರುವುದು, ಸಾಲಮನ್ನಾ ವಿಷಯ, ಹೊಸಪೇಟೆ ಬಳಿ ಕಾರು ಅಪಘಾತದಲ್ಲಿ ಸಚಿವ ಆರ್. ಅಶೋಕ್ ಪುತ್ರನ ಹೆಸರು ಪ್ರಸ್ತಾಪ. ಇದೇರೀತಿ ಶಾಸಕ ಎನ್ ಎ ಹ್ಯಾರೀಸ್ ಪುತ್ರ ಮೊಹಮ್ಮದ್ ನಲಪಾಡ್ ಕಾರು ಅಪಘಾತ ಪ್ರಕರಣ ಮೊದಲಾದ ಸಂಗತಿಗಳು ಪ್ರಸ್ತಾಪವಾಗಲಿವೆ. ರಾಜ್ಯ ಸರ್ಕಾರ ವೈಫಲ್ಯಗಳನ್ನು ಮುಂದಿಟ್ಟುಕೊಂಡು ವಿಪಕ್ಷಗಳು ಮುಗಿಬೀಳಲು ಸಜ್ಜಾಗಿವೆ. ಪ್ರಸಕ್ತ ಅಧಿವೇಶನದಲ್ಲಿ ಆರು ವಿಧೇಯಕಗಳು ಮಂಡನೆಯಾಗಲಿವೆ. ದಿ.2 ಮತ್ತು 3ರಂದು ಸಂವಿಧಾನ ಕುರಿತಂತೆ ವಿಶೇಷ ಅಧಿವೇಶನ ನಡೆಯಲಿದೆ. ಮಾರ್ಚ್ 5ರಂದು ಮುಖ್ಯಮಂತ್ರಿ ಯಡಿಯೂರಪ್ಪ ಬಜೆಟ್ ಮಂಡಿಸಲಿದ್ದಾರೆ.